# ಗೃಹಲಕ್ಷ್ಮಿ ಯೋಜನೆಯ ಕುರಿತು ಟಿಪ್ಪಣಿ

** ** **

- ರಾಜ್ಯದ ಮಹಿಳೆಯರ ಆರ್ಥಿಕ ಸಬಲೀಕರಣವನ್ನು ಹೆಚ್ಚಿಸುವ ಸಲುವಾಗಿ ಕುಟುಂಬದ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು ರೂ.2000/-ಗಳನ್ನು ನೀಡುವ **ಗೃಹಲಕ್ಷ್ಮಿ** ಯೋಜನೆಯು ಮೈಸೂರಿನಲ್ಲಿ ಚಾಲನೆಗೊಂಡು ದಿನಾಂಕ:30-08-2023 ರಿಂದ ಫಲಾನುಭವಿಗಳಿಗೆ ಹಣ ವರ್ಗಾವಣೆ ಪ್ರಕ್ರಿಯೆ ಆರಂಭಿಸಲಾಗಿದೆ.
- ಆಗಸ್ಟ ಮಾಹೆಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 1.08 ಕೋಟಿ ಅರ್ಹ ಫಲಾನುಭವಿಗಳಿಗೆ ರೂ.2169 ಕೋಟಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಿದೆ.
- ದಿನಾಂಕ:04-10-2023 ರವರೆಗೆ 93.00 ಲಕ್ಷ ಫಲಾನುಭವಿಗಳ ಬ್ಯಾಂಕ್ ಖಾತೆಗೆ ರೂ.2000/- ಧನಸಹಾಯವನ್ನು ಯಶಸ್ವಿಯಾಗಿ ವರ್ಗಾವಣೆ ಮಾಡಲಾಗಿದೆ.
- 5.5 ಲಕ್ಷ ಫಲಾನುಭವಿಗಳ ಮಾಹಿತಿಯನ್ನು ಪರಿಶೀಲಿಸಿ DBT ಮೂಲಕ ಹಣ ಪಾವತಿಸಲು ಕ್ರಮವಹಿಸಲಾಗುತ್ತಿದೆ.
- ಉಳಿದ 9.44 ಲಕ್ಷ ಫಲಾನುಭವಿಗಳ ವಿವರಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಸಮಸ್ಯೆ ಇದ್ದು ವಿವರ ಈ ಕೆಳಕಂಡಂತಿದೆ.

| | | | |
|---|---|---|---|
| 1 | ಅನರ್ಹರಾದವರು | 3082 | ಮರಣ ಹೊಂದಿದ ಫಲಾನುಭವಿಗಳು |
| 2 | ಡೆಮೋ ದೃಢೀಕರಣ ವಿಫಲವಾಗಿರುವುದು | 1,59,356 | ಫಲಾನುಭವಿಯ ಆಧಾರ್ ಮತ್ತು ಅಕೌಂಟ್ ನಲ್ಲಿರುವ ಹೆಸರಿನಲ್ಲಿ ವ್ಯತ್ಯಾಸವಿದ್ದು ಬ್ಯಾಂಕ್ ಮೂಲಕ ಸರಿಪಡಿಸಲಾಗುತ್ತಿದೆ. |
| 3 | ಫಲಾನುಭವಿಯ ಖಾತೆಯು ಆಧಾರ್ ನೊಂದಿಗೆ ಜೋಡಣೆಯಾಗದಿರುವುದು | 5,96,268 | ಇದುವರೆಗೂ **2,17,536** ಫಲಾನುಭವಿಗಳ ಬ್ಯಾಂಕ್ ಖಾತೆಯನ್ನು ಯಶಸ್ವಿಯಾಗಿ ಆಧಾರ್ ನೊಂದಿಗೆ ಜೋಡಿಸಲಾಗಿದೆ. ಉಳಿದ ಫಲಾನುಭವಿಗಳಿಗೂ ಸಹ CDPO ಮೂಲಕ ಮಾಹಿತಿ ನೀಡಿ ಆಧಾರ್ ಸೀಡ್ ಮಾಡಿಸಲು ಕ್ರಮವಹಿಸಲಾಗಿದೆ. |
| 4 | ಫಲಾನುಭವಿಗಳ ಹೆಸರು ಮತ್ತು ವಿಳಾಸಕ್ಕೆ ಸಂಬಂಧಿಸಿದಂತೆ ವ್ಯತ್ಯಾಸಗಳು | 1,75,683 | ಬ್ಯಾಂಕ್‌ಗಳ ಮೂಲಕ ಫಲಾನುಭವಿಗಳ eKyc ಮಾಡಿಸಲು ಕ್ರಮವಹಿಸಲಾಗಿದೆ. |
| 5 | ಇಂದೀಕರಿಸಿದ ದತ್ತಾಂಶ | 9,766 | ಸೇವಾಸಿಂಧು ವತಿಯಿಂದ ಪುನರ್ ಪರಿಶೀಲಿಸಲಾಗುತ್ತಿದೆ. |
| **ಒಟ್ಟು** | | **9,44,155** | |

- ಸೆಪ್ಟೆಂಬರ್ ಮಾಹೆಯಲ್ಲಿ ಒಟ್ಟು 1.14 ಲಕ್ಷ ಫಲಾನುಭವಿಗಳಿಗೆ 2ನೇ ಮಾಹೆಯ DBT ಗಾಗಿ ರೂ.2280.00 ಕೋಟಿಗಳನ್ನು ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆಗೊಳಿಸಿ ಫಲಾನುಭವಿಗಳಿಗೆ ಪಾವತಿಸಲು ಕ್ರಮವಹಿಸಲಾಗಿದೆ.